ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

**" ಅಭಿವೃದ್ಧಿ ಭವನ "** ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ:ಹೈ.ಕ.ಪ್ರ.ಅ.ಮಂ/ಯೋಜನೆ/ಮ್ಯಾಕ್ರೋ/ಸಾಮನ್ಯ/46/2017-18 ದಿನಾಂಕ: 21-10-2017

ಗೆ,

1) ಎಲ್ಲಾ ಜಿಲ್ಲಾಧಿಕಾರಿಗಳು,
ಹೈ.ಕ.ವಿಭಾಗ
2) ಎಲ್ಲಾ ಮುಖ್ಯಕಾರ್ಯನಿವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,
ಹೈ.ಕ.ವಿಭಾಗ.

**ಅತಿ ಜರೂರು**

ವಿಷಯ:- 2017-18ನೇ ಸಾಲಿಗೆ ಹೈ.ಕ.ಪ್ರ.ಅ.ಮಂಡಳಿಯಿಂದ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಆಡಳಿತಾತ್ಮಕ ಅನುಮೋದನೆ ಎಂದು ಪರಿಗಣಿಸುವ ಕುರಿತು.

*****

2017-18ನೇ ಸಾಲಿಗೆ ಹೈ.ಕ.ಪ್ರ.ಅ.ಮಂಡಳಿಯಿಂದ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಆಡಳಿತಾತ್ಮಕ ಅನುಮೋದನೆ ಎಂದು ಪರಿಗಣಿಸಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಕ್ರಿಯಾ ಯೋಜನೆ ಮಂಜೂರಾತಿ ಆದೇಶದಲ್ಲಿ ಹಾಗೂ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೂಡ ತಿಳಿಸಲಾಗಿರುತ್ತದೆ. ಆದರೆ ದಿನಾಂಕ: 17-10-2017 ರಂದು ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅನುಷ್ಠಾನ ಇಲಾಖಾಧಿಕಾರಿಗಳು ಈವರೆಗೂ ಟೆಂಡರ್ ಕರೆಯದೇ ಇರುವುದು ವಿಷಾಧನೀಯವಾಗಿದೆ.

2017-18ನೇ ಸಾಲಿಗೆ ಕ್ರಿಯಾ ಯೋಜನೆ ಮಂಜೂರಾತಿಯನ್ನೇ ಆಡಳಿತಾತ್ಮಕ ಅನುಮೋದನೆಯೆಂದು ಪರಿಗಣಿಸಿ ಟೆಂಡರ್ ಪ್ರಕ್ರಿಯನ್ನು ಜರುಗಿಸಲು ಕ್ರಮ ಕೈಗೊಳ್ಳುವುದು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಕಾರ್ಯಾದೇಶ ನೀಡುವ ಪೂರ್ವ ಕಡ್ಡಾಯವಾಗಿ ಸದರಿ ಕಾಮಗಾರಿಗಳಿಗೆ ಸಕ್ಷಮ ಆಡಳಿತಾತ್ಮಕ ಪ್ರಾಧಿಕಾರದಿಂದ ಅಂದಾಜು ಪತ್ರಿಕೆಯ ಅನುಮೋದನೆಯನ್ನು ಪಡೆಯತಕ್ಕದ್ದು. 2017-18ನೇ ಸಾಲಿಗೆ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಎಲ್ಲಾ ಕಾಮಗಾರಿಗಳಿಗೆ ದಿನಾಂಕ: 31-10-2017ರೊಳಗೆ ಟೆಂಡರ್ ಪ್ರಕ್ರಿಯನ್ನು ಕೈಗೊಳ್ಳುವುದು ಹಾಗೂ ಆನ್‌ಲೈನ್‌ದಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ,ಕಲಬುರಗಿ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

1) ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರುಗಿ
2) ಅಧೀಕ್ಷಕ ಅಭಿಯಂತರರು, PWD / PRED/ RWS / KRIDL ಕಲಬುರಗಿ & ಬಳ್ಳಾರಿ
3) ಎಲ್ಲಾ ಅನುಷ್ಠಾನಾಧಿಕಾರಿಗಳು, ಹೈ.ಕ.ವಿಭಾಗ.